# ದಾನವನ ಕೊಂದದ್ದಲ್ಲ ಕಾಣಿರೊ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The wordings mentioned without highlights are as per Ref. 1. The wordings in Ref. 2 (given in yellow highlights) and that of the singer are matching. The wordings in Ref. 3 are similar to Ref. 2 with few differences which are not considered here.

ರಾಗ: ಪೂರ್ವಿ (ಧನ್ಯಾಸಿ) ತಾಳ: ಆದಿ

ದಾನವನ ಕೊಂದದ್ದಲ್ಲ ಕಾಣಿರೋ || ಪ ||
ನಾನಾ (ಗಾನ) ವಿನೋದಿ ನಮ್ಮ ತೊರೆವೆಯ ನರಸಿಂಹ || ಅಪ ||

ಅಚ್ಚ ಪ್ರಹಲ್ಲಾದನೆಂಬ ರತ್ನವಿದ್ದ ಒಡಲೊಳು
ಬಿಚ್ಚಿ ಬಗಿದು ನೋಡಿದನಿನ್ನೆಷ್ಟು ಇದ್ದಾವೆಂದು || 1 ||
(ಅಚ್ಚ ಪುರುಷನೆಂಬ ಸ್ವಚ್ಚ ರತ್ನ ಒಡಲೊಳು
ಬಿಚ್ಚಿ ಬೆದಕಿ ನೋಡಿದರೆ ಇನ್ನೆಷ್ಟು ಇದ್ದಾವೊ ಎಂದು || 1 ||)

ನಂಟುತನ ಬೆಳೆಯ ಬೇಕೆಂದು ಕರುಳ ಕೊರಳೊಳು
ಗಂಟು ಹಾಕಿ ಕೊಂಡನೆಷ್ಟು ಸ್ನೇಹ ಸಂಬಂಧದಿಂದ || 2 ||
(ನೆಂಟತನವು ಬೆಳೆಯ ಬೇಕೆಂದು ಕರುಳ ಕೊರಳೊಳು
ಗಂಟು ಹಾಕಿ ಕೊಂಡನೆಷ್ಟೋ ದೇಹ ಸಂಬಂಧದಿಂದ || 2 || )

ಸಿರಿ ಮುದ್ದು (ತೊರವೆಯ) ನಾರಸಿಂಹ ಪ್ರಹ್ಲಾದ ಪಾಲಕ
ಉರಿಮೋರೆ ದೈವ ನಮ್ಮ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ನರಸಿಂಹಾವತಾರದ ಸ್ವಾರಸ್ಯವು ಕೋಪದಿಂದ ಹಿರಣ್ಯಕಶಿಪುವನ್ನು ಕೊಂದದ್ದಲ್ಲ; ಪೂರ್ವ ಜನ್ಮದಲ್ಲಿ ತನ್ನ ಪರಿಚಾರಕರೇ ಆದ ಜಯ ವಿಜಯರನ್ನು, ಸಾತ್ತ್ವಿಕರಾದರೂ ಕಾರಣಾಂತರದಿಂದ ದಾನವರಾಗಿ ಹಿರಣ್ಯಾಕ್ಷ–ಕಶಿಪುಗಳೆಂದು ಮೈದಳೆದವರನ್ನು, ಕರುಣೆಯಿಂದ ಉದ್ಧರಿಸಲೆಂದೇ ನರಸಿಂಹನಾಗಿ ವಿಷ್ಣುವು ಅವತರಿಸಿದ್ದು.

**ಅಚ್ಚಪುರುಷ** – ಒಳ್ಳೆಯ ಮನುಷ್ಯ; ಸಾತ್ತ್ವಿಕ.

**ನೆಂಟತನವು...** – ವೈಕುಂಠದ ದ್ವಾರಪಾಲಕನಾಗಿದ್ದವನೊಂದಿಗೆ ತನ್ನ ನೆಂಟು ಎಂದೂ ಇದ್ದದ್ದೇ. ಶಾಪ ತಳೆದು ಅವನು ದಾನವನಾದ ಮಾತ್ರಕ್ಕೆ ಈ ನೆಂಟೇನು ಹರಿಯಲಿಲ್ಲ. ಅವನೊಂದಿಗಿರುವ ಕರುಳ ಸಂಬಂಧವನ್ನು ಕಾಣಿಸಲೆಂದೇ, ಹರಿಯು ಹಿರಣ್ಯಕಶಿಪುವಿನ ಕರುಳನ್ನು ಬಗೆದು ತನ್ನ ಕೊರಳಲ್ಲಿ ಸೇರಿಸಿಕೊಂಡ.

**ಉರಿಮೋರೆ** – ಉರಿಯುವ ಮೊಗದವನು; ಭಯಂಕರ.

**Classification:** Keerthane
**Ankita:** purandara vittala
**Location:** Torave / Toravi. This is about 6 kms from Vijayapura (earlier called Bijapura). Bhagavantha Toravi Narasimha is inside a cave, under the ground. It is believed that the idol is made out of Shaligrama Stone (Shile).
**Category:** Narasimha Stuti
**Sub-Category:** asura, Narasimha, bandhu, deha, prahallada, daiva, toravi, udara, koralu,
**Pravachana:** NA
**Explanation:** NA